

# ನಳ ಮಹಾರಾಜನ ನಟನೆಯ ಕನಸು

'ಭೀಮಸೇನ ನಳಮಹಾರಾಜ' ಸಿನಿಮಾದ ಮೂಲಕ ಅರವಿಂದ ಅಯ್ಯರ್, ನಾಯಕನಟನಾಗಿ ತೆರೆಯ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ಈ ಸಿನಿಮಾ ಅ. 29ರಂದು ಅಮೆಜಾನ್ ಪ್ರೈಮ್‌ನಲ್ಲಿ ಬಿಡುಗಡೆಯಾಗಲಿದೆ.

■ ಪದ್ಮನಾಭ ಭಟ್

ಗಾಂಧಿನಗರ ಹಲವು ಕಲಾವಿದರ ಬೆಳವಣಿಗೆಯನ್ನು ಕಂಡಿದೆ. ಹಾಗೆ ನೋಡಿದರೆ ಸ್ಟಾರ್‌ಗಳನ್ನು ಹುಟ್ಟಿಸಿ ಮಾರುವ ಸಂತೆ ಅದು. ಆದರೆ ಅರವಿಂದ್ ಅಯ್ಯರ್ ವಿಷಯದಲ್ಲಿ ಗಾಂಧಿನಗರಕ್ಕೆ ಇನ್ನೂ ಹೆಚ್ಚಿನ ಸ್ಥಾನವಿದೆ. ಗಾಂಧಿನಗರ ಅವರೊಳಗಿನ ನಟನ ಬೆಳವಣಿಗೆಗೆ ಕಾರಣವಾದ ಸ್ಥಳವಷ್ಟೇ ಅಲ್ಲ, ಅವರ ಜನ್ಮಸ್ಥಳವೂ ಹೌದು!

ಅವರು ಹುಟ್ಟಿದ್ದು ಗಾಂಧಿನಗರದ ಬಿಂದು ನರ್ಸಿಂಗ್ ಹೋಮ್‌ನಲ್ಲಿ. ಈಶ್ವರಿ ಚಿತ್ರಮಂದಿರದ ಪಕ್ಕದಲ್ಲಿಯೇ ಅವರ ಮನೆ ಇತ್ತು. ಹೀಗಾಗಿ 'ನಾನು ಗಾಂಧಿನಗರದಲ್ಲೇ ಹುಟ್ಟಿದ್ದು' ಎಂದವರು ಧೈರ್ಯವಾಗಿ ಹೇಳಿಕೊಳ್ಳಬಹುದು.

ಗಾಂಧಿನಗರದಲ್ಲಿ ಹುಟ್ಟಿದ್ದು ಬಿಟ್ಟರೆ ಸಿನಿಮಾ ಜಗತ್ತಿಗೂ ಅವರಿಗೂ ಇದ್ದ ಸಂಬಂಧವೆಂದರೆ ಅವರ ಮನೆಯ ಕಾಂಪೌಂಡಿಗೆ ಅಂಟಿಸುತ್ತಿದ್ದ ಸಿನಿಮಾ ಪೋಸ್ಟರುಗಳಷ್ಟೆ.

ಅರವಿಂದ್ ಓದಲಿಕ್ಕೆಂದು ಯು.ಕೆ.ಗೆ ಹೋದವರು, ಅಲ್ಲಿಯೇ ವೃತ್ತಿಜೀವನವನ್ನೂ ಆರಂಭಿಸಿದರು. ಆದರೆ ಕೆಲಸದಿಂದ ಮನೆಗೆ ಬಂದು ಅಡುಗೆ ಮಾಡುವಾಗ ಒಂದು ಸಿನಿಮಾ, ಅಡುಗೆ ಮುಗಿಸಿ ಊಟ ಮಾಡುವಾಗ ಒಂದು ಸಿನಿಮಾ ಎಂದೆಲ್ಲ, ಬಿಡುವಿನಲ್ಲೆಲ್ಲ ಸಿನಿಮಾ ನೋಡುವುದು ಅವರ ಪ್ರಿಯವಾದ ಅಭ್ಯಾಸವಾಗಿತ್ತು. ಈ ಅಭ್ಯಾಸದಿಂದಲೇ ಅವರು ನಟನೆಯ ದಾರಿ ಹುಡುಕಿಕೊಂಡು ಮರಳಿ ಬೆಂಗಳೂರಿಗೆ ಬಂದಿದ್ದು.

'ಸಿನಿಮಾಗಳನ್ನು ನೋಡುತ್ತ ನೋಡುತ್ತಲೇ ನಾನೂ ನಟನಾಗಬೇಕು ಎಂಬ ಆಸೆ ಮೊಳೆಯತೊಡಗಿತು. ಹಾಗೆಯೇ ನಾನು ಹುಟ್ಟಿ ಬೆಳೆದ ಬೆಂಗಳೂರಿನಲ್ಲಿಯೇ ಪ್ರಸಿದ್ಧನಾಗುವಂಥ ಕೆಲಸ ಮಾಡಬೇಕು ಎಂದೂ ಯಾವಾಗಲೂ ಅನಿಸುತ್ತಿತ್ತು. ಹಾಗಾಗಿ ಸಿನಿಮಾ ನಟನೆಯನ್ನೇ ಆಯ್ದುಕೊಂಡು ಬೆಂಗಳೂರಿಗೆ ಮರಳಿದೆ' ಎಂದು ವಿವರಿಸುತ್ತಾರೆ.

ಬೆಂಗಳೂರಿಗೆ ಬಂದು ಕೆಲಕಾಲ ರಂಗಭೂಮಿ ಚಟುವಟಿಕೆಗಳಲ್ಲಿಯೂ ತೊಡಗಿಕೊಂಡಿದ್ದ ಅರವಿಂದ್‌ಗೆ ಮೊದಲ ಅವಕಾಶ ಸಿಕ್ಕಿದ್ದು, ಅವರಿಂದ ಶಾಸ್ತ್ರಿ ಅವರ 'ಕಹಿ' ಸಿನಿಮಾದಲ್ಲಿ. ನಂತರ 'ಕಿರಿಕ್ ಪಾರ್ಟಿ' ಸಿನಿಮಾದಲ್ಲಿನ ಅವರ ಪಾತ್ರ ಹಲವರ ಗಮನಸೆಳೆಯಿತು. ಅದೇ ಮುಂದೆ 'ಭೀಮಸೇನ ನಳಮಹಾರಾಜ' ಸಿನಿಮಾದಲ್ಲಿ ನಾಯಕನಾಗಿ ನಟಿಸಲು ಅವಕಾಶ ಸಿಗುವಂತೆ ಮಾಡಿದ್ದು.

''ಭೀಮಸೇನ ನಳಮಹಾರಾಜ' ಸಿನಿಮಾದ ಕಥೆ ಏನು ಎಂಬುದನ್ನೆಲ್ಲ ಪೂರ್ತಿ ಹೇಳಿಬಿಡಬೇಕು ಎಂದು ತುಂಬಾ ಟೆಮ್ಟ್ ಆಗುತ್ತದೆ ನನಗೆ. ಆದರೆ ಚಿತ್ರತಂಡದವರು ಕಥೆಯ ಬಗ್ಗೆ ಸುಳಿವು ಬಿಟ್ಟುಕೊಡಬಾರದು ಎಂದು ಷರತ್ತು ಹಾಕಿದ್ದಾರೆ' ಎಂದು ನಗುತ್ತಲೇ ಮಾತಿಗಾರಂಭಿಸುತ್ತಾರೆ ಅರವಿಂದ್.

'ಚಿಕ್ಕವಯಸ್ಸಿನವರಿಂದ ಹಿಡಿದು ವೃದ್ಧರವರೆಗೆ ಎಲ್ಲರೂ ಒಟ್ಟಿಗೇ ಕೂತು ನೋಡಬಹುದಾದ ಸದಭಿರುಚಿಯ ಸಿನಿಮಾ ಇದು. ಅಡುಗೆಗೆ ಉಪ್ಪು, ಹುಳಿ, ಖಾರಗಳನ್ನೆಲ್ಲ ಹೇಗೆ ಬೆರೆಸುತ್ತೇವೆಯೋ ಹಾಗೆ ಇಲ್ಲಿನ ಒಂದೊಂದು ಪಾತ್ರಗಳೂ ಅಡುಗೆಯಲ್ಲಿನ ವಿಧ ವಿಧ ಫ್ಲೇವರ್‌ಗಳಿದ್ದ ಹಾಗೆ. ಅಡುಗೆ ಭಟ್ಟ ಎಲ್ಲವನ್ನೂ ಸೇರಿ ಒಂದು ಒಳ್ಳೆಯ ಅಡುಗೆ ಮಾಡುವ ಹಾಗೆ ಇಲ್ಲಿ ನಾಯಕ ಅಡುಗೆಯನ್ನೂ ಮನುಷ್ಯ ಸಂಬಂಧಗಳನ್ನೂ ಬೆಸೆಯುತ್ತಾ ಹೋಗುತ್ತಾನೆ' ಎಂದು ಸಿನಿಮಾ ಕುರಿತು ಅವರು ವಿವರಿಸುತ್ತಾರೆ.

ಚಿತ್ರಮಂದಿರಗಳಲ್ಲಿ ಅದ್ದೂರಿಯಾಗಿ ಬಿಡುಗಡೆ ಮಾಡಬೇಕು ಎಂದು ನಿಶ್ಚಯಿಸಿ ಮಾಡಿದ ಸಿನಿಮಾ ಓಟಿಟಿಯಲ್ಲಿ ಬಿಡುಗಡೆಯಾಗುತ್ತಿರುವುದಕ್ಕೆ ಅವರಿಗೆ ತುಸು ಬೇಸರವೂ ಇರುವಂತಿದೆ. 'ಆದರೆ ಏನು ಮಾಡುವುದು? ಕೊರೊನಾ ಬರುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಚಿತ್ರಮಂದಿರಗಳಲ್ಲಿಯೇ ಬಿಡುಗಡೆ ಮಾಡುತ್ತೇವೆ ಎಂದು ನಿರ್ಧರಿಸುವುದೂ ಕಷ್ಟ. ಹಾಗಾಗಿ ಓಟಿಟಿಯಲ್ಲಿ ಬಿಡುಗಡೆಯಾಗಿದೆ' ಎಂದು ಹೇಳಿಕೊಳ್ಳುತ್ತಾರೆ.

ಅರವಿಂದ್‌ಗೆ ಅಡುಗೆ ಮಾಡುವುದೆಂದರೆ ತುಂಬ ಇಷ್ಟ. ಅವರ ಅಡುಗೆಯನ್ನು ಮೆಚ್ಚುವ ಸ್ನೇಹಿತರ ಬಳಗವೂ ದೊಡ್ಡದಿದೆ. ತಾವು ನಾಯಕನಾಗಿ ನಟಿಸುತ್ತಿರುವ ಮೊದಲ ಸಿನಿಮಾದಲ್ಲಿ ಅಡುಗೆ ಭಟ್ಟನ ಪಾತ್ರದಲ್ಲಿಯೇ ನಟಿಸಿರುವುದು ಅವರ ಉಮೇದನ್ನು ಇಮ್ಮಡಿಗೊಳಿಸಿದೆ.

'ಭೀಮಸೇನ ನಳಮಹಾರಾಜ' ಜನರಿಗೆ ಖಂಡಿತ ಇಷ್ಟವಾಗುತ್ತದೆ ಎಂಬ ವಿಶ್ವಾಸದಲ್ಲಿರುವ ಅರವಿಂದ್, ಇನ್ನೊಂದು ಸಿನಿಮಾಕ್ಕೂ ಸಹಿ ಹಾಕಿದ್ದಾರೆ. ಆದರೆ ಆ ಸಿನಿಮಾದ ಬಗ್ಗೆ ಈಗಲೇ ಗುಟ್ಟು ಬಿಟ್ಟುಕೊಡಲು ನಿರಾಕರಿಸುತ್ತಾರೆ. ಅವರು ಮುಖ್ಯಪಾತ್ರದಲ್ಲಿ ನಟಿಸಿರುವ, ಶಿವರಾಜ್‌ಕುಮಾರ್ ನಿರ್ಮಿಸಿರುವ ವೆಬ್ ಸೀರೀಸ್ ಕೂಡ ಇನ್ನೂ ಬಿಡುಗಡೆಯಾಗಬೇಕಾಗಿದೆ.

ಮುಂದೆ ಸಾಕಷ್ಟು ಭಿನ್ನ ಹಾಗೂ ಗಟ್ಟಿಯಾದ ಪಾತ್ರಗಳು ಸಿಗುತ್ತವೆ; ನಟನಾ ಜಗತ್ತಿನಲ್ಲಿ ತಮ್ಮ ಬದುಕೂ ಭೀಮಸೇನ ನಳಮಹಾರಾಜರು ಮಾಡಿದ ಅಡುಗೆಯ ಹಾಗೆ ರುಚಿಕಟ್ಟಾಗಿರುತ್ತದೆ ಎಂಬ ನಂಬಿಕೆಯಲ್ಲಿ ಅವರು ಇನ್ನಷ್ಟು ಅವಕಾಶಗಳಿಗಾಗಿ ಎದುರು ನೋಡುತ್ತಿದ್ದಾರೆ. ■

